**ಸಾಕ್ಷಿಯನ್ನು ದಿನಾಂಕಃ 04-09-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ. ಕೆ.ಜೆ.ಪಿ ವಕೀಲರವರಿಂದಃ**

ನನಗೆ ದಾವಾ ಜಮೀನಿನ ಸರ್ವೆ ನಂಬರು ಗೊತ್ತಿರುವುದಿಲ್ಲ. ನಾನು 30 ವರ್ಷಗಳಿಂದ ದಾವಣಗೆರೆಯಲ್ಲಿ ವಾಸವಿದ್ದೇನೆ ಅಂದರೆ ಸರಿಯಲ್ಲ. 20 ವರ್ಷಗಳಿಂದ ದಾವಣೆಗೆರೆಯಲ್ಲಿದ್ದೇನೆ. ಡೊರ್ ನಂ 40 ಇದು ಮೂಲತಃ ಹನುಮಂತಪ್ಪ ಇವರಿಗೆ ಸೇರಿದ್ದು ಮತ್ತು ಅವರಿಂದ ಅಹ್ಮದುಲ್ಲಾ ಖಾನ್ ಸಾಬ್ ಇವರು ಖರೀದಿ ಮಾಡಿದರು. ಪಂಚಾಯತಿ ಡೊರ್ ನಂಬರು ಅಧಾರದ ಮೇಲೆ ಖರೀದಿ ವ್ಯವಹಾರ ನಡೆದಿರುತ್ತದೆ. ದಾವಾ ಸ್ವತ್ತು ಮತ್ತು ಡೋರ ನಂ 40 ಇವೆರಡೂ ಬೇರೆ ಬೇರೆ ಅಗಿರುತ್ತವೆ ಅಂದರೆ ನನಗೆ ಗೊತ್ತಿಲ್ಲ. ನನಗೆ ಈ ಕೇಸಿನ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ ಅಂರೆ ಸರಿಯಲ್ಲ. ಈ ದಾವೆಯನ್ನು ಜವಾತ್ ನಿಂದ ನಾವೇ ಹಾಕಿದ್ದೇವೆ. ಈ ದಾವೆಯನ್ನು ಹನುಮಂತಪ್ಪ ಇವರ ವಿರುದ್ಧ ಹಾಕಿದ್ದೇವೆ.

2. ದಾವಾ ಅಸ್ತಿಯ ***ಪೂರ್ವಕ್ಕೆ*** ಹರಪನಹಳ್ಳಿ ರಸ್ತೆ, ***ಪಶ್ಚಿಮಕ್ಕೆ*** ಸಣ್ಣಪ್ಪನ ಮನೆ, ***ಉತ್ತರಕ್ಕೆ*** ಮನೆಗಳು ಇದ್ದು ಅದು ಯಾರ ಮನೆ ಎಂದು ನನಗೆ ಮರೆತು ಹೋಗಿರುತ್ತದೆ. ***ದಕ್ಷಿಣಕ್ಕೆ*** ಪೊಲೀಸ್ ಠಾಣೆ ಇರುವುದು.

3. ಡೋರ್ ನಂ 40 ರ ***ಪೂರ್ವಕ್ಕೆ*** ಹರಪನಹಳ್ಳಿ ರಸ್ತೆ, ***ಪಶ್ಚಿಮಕ್ಕೆ*** ಸಣ್ಣಪ್ಪನ ಮನೆ, ***ಉತ್ತರಕ್ಕೆ*** ಮನೆಗಳು, ***ದಕ್ಷಿಣಕ್ಕೆ*** ಪೊಲೀಸ್ ಠಾಣೆ ಇರುವುದು.

4. ನಾನು ಮೇಲೆ ಹೇಳಿದ 2 ಅಸ್ತಿಯ ಚೆಕ್ಕು ಬಂದಿಗಳು ಸರಿ ಇರುವುದಿಲ್ಲ ಮತ್ತು ಸುಳ್ಳಾಗಿರುತ್ತವೆ ಅಂದರೆ ಸರಿಯಲ್ಲ. ದಾವಾ ಅಸ್ತಿಗೆ ಸಂಬಂದಿಸಿದಂತೆ ನಾನು ಕಂದಾಯ ದಾಖಲೆಗಳನ್ನು ನೋಡಿದ್ದೇನೆ ಯಾವ ದಾಖಲೆಗಳು ಎಂದು ನನಗೆ ಈಗ ಹೇಳಲಾಗುವುದಿಲ್ಲ. ದಾವಾ ಅಸ್ತಿಯ ಕಂದಾಯ ದಾಖಲೆಗಳು 1928 ರ ಸೆಟಲ್ ಮೆಂಟ್ ರಿಜಿಸ್ಟರ್ ನಿಂದ ಹಿಡಿದು 1968 ರಿಂದ ಇಲ್ಲಿಯವರೆಗೂ ಕೂಡ ವಾದಿಗಳು ಹಾಗೂ ಅವರ ಪೂರ್ವಜರ ಹೆಸರಿನಲ್ಲಿ ಇರುವುದು ಮತುತ ಅಂದಿನಿಂದ ಇಲ್ಲಿಯವರೂ ವಾದಿಯರು ಹಾಗೂ ಪೂರ್ವಜರು ಸ್ವಾಧಿನ ಹೊಂದಿ ಸಾಗುವಳಿ

ಮಾಡುತ್ತಿರುವರು ಅಂದರೆ ಸರಿಯಲ್ಲ. ಪ್ರತಿವಾದಿಗಳಿ ದಾವಾ ಅಸ್ತಿಯ ಮೇಲೆ ಹಕ್ಕು ಅಧಿಕಾರ ಹಿತಾಸಕ್ತಿ ಸ್ವಾಧೀನ ಇರುವುದಿಲ್ಲ ಅಂದರೆ ಸರಿಯಲ್ಲ.

5. ದಾವಾ ಅಸ್ತಿಯಲ್ಲಿ ಸುನ್ನಿ ಜಜಮಾತಿ ಜಾಮಿಯಾ ಮಸೀದಿ ಇರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಅಸ್ತಿಯನ್ನು ಕಬಳಿಸಲು ಸದರಿ ಮಸೀದಿ ದಾವಾ ಅಸ್ತಿಯಲ್ಲಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

04-09-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 04.09.2025